ಗಣೇಶ ಎಂ. ಪೈ, ಬೆಂಗಳೂರು
*ಇಲ್ಲಿಯ ರಸ್ತೆಗಳಲ್ಲಿ ಸುತ್ತುವ ಹಸುಗಳು ಕನ್ನಡ ಪತ್ರಿಕೆಗಳನ್ನೇ ತಿನ್ನುತ್ತವೆ, ಯಾಕಿರಬಹುದು ಸ್ವಾಮಿ?*



ಕನ್ನಡ ಸುಲಭವಾಗಿ ಜೀರ್ಣಿಸಿಕೊಳ್ಳಬಲ್ಲ ಭಾಷೆಯಂತೆ!

ಗಾಯತ್ರಿ, ರಾಜಾಜಿನಗರ
*ಲೋಕದ ಡೊಂಕು ತಿದ್ದುವುದಕ್ಕೆ ಸಾಧು, ಸಂನ್ಯಾಸಿಗಳಿಂದ ಆಗುವಂತಿದ್ದಿದ್ದರೆ...?*
ಬಾಬಾ ರಾಮ್‌ದೇವ್ ಕತ್ತಲಲ್ಲಿ ಓಡಿಹೋಗಬೇಕಾಗುತ್ತಿರಲಿಲ್ಲ!

ಬಿ.ಎಸ್.ನಾರಾಯಣಸ್ವಾಮಿ, ಬೋಧನಹೊಸಹಳ್ಳಿ
*ಹೆಂಡತಿಯ ಮುತ್ತು ಸಿಹಿಯೋ, ಪ್ರೇಯಸಿಯ ಮುತ್ತು ಸಿಹಿಯೋ?*
ಹೆಂಡತಿಯದು ಬೆಲ್ಲದಂತೆ; ಪ್ರೇಯಸಿಯದು ಫಾರಿನ್ ಚಾಕ್ಲೇಟ್‌ನಂತೆ ಮೊದಲು ಸಿಹಿ, ನಂತರ ಕಪ್ಪಟ ಕಹಿ!

ಕೊಕ್ಕಡ ವೆಂಕಟ್ರಮಣಭಟ್, ಮಂಡ್ಯ
*ಹುಟ್ಟಿದ ಮಗು ಅಳದಿದ್ದರೆ ಅಮ್ಮನೇಕೆ ಅಳುತ್ತಾಳೆ?*



ಅಳುವುದಕ್ಕೂ ಜನನಿ ತಾನೆ ಮೊದಲ ಗುರುವು ಆಗಲು!

ಎಂ.ಎಸ್. ಗುರುರಾಜಾಚಾರು, ಬಳ್ಳಾರಿ
*ಎಸ್‌ಎಂಎಸ್ ಮೂಲಕ ಮದುವೆ ಆದರೆ ಎಸ್‌ಎಂಎಸ್ ಮೂಲಕ ಮಕ್ಕಳು ಆಗುವ ಹಾಗಿದ್ದರೆ?*
ಮಕ್ಕಳದು ಮಾಮೂಲಿ ಹಲ್ಲಲ್ಲದೆ ಬ್ಲೂಟೂತ್ ಆಗಿರುತ್ತಿತ್ತು!

ನವಿರವಿ, ಬಾಳೆಹೊನ್ನೂರು
*ವಿವಾಹಕ್ಕೂ, ಪ್ರವಾಹಕ್ಕೂ ಏನಾದರೂ ಸಂಬಂಧ ಇದೆಯಾ?*
ಎರಡರಲ್ಲಿಯೂ ಕೊಚ್ಚಿಹೋಗುವ ಸಂಭವಗಳು ಹೆಚ್ಚು!

ಮಹಾವೀರ ಕಾಸಾರ, ಚನ್ನಗಿರಿ
*ಬ್ರಹ್ಮಚಾರಿಗೂ, ಅವಿವಾಹಿತನಿಗೂ ಏನು ವ್ಯತ್ಯಾಸ?*
ಬ್ರಹ್ಮಚಾರಿ ಉಡ; ಅವಿವಾಹಿತ ದೀಪದ ಹುಳು.

ಶಿವಮೊಗ್ಗ ರಮೇಶ್, ಮೈಸೂರು
*ತುತ್ತು ಕೂಳಿಗೂ ಒದ್ದಾಡುವ ಜನರು ಮೊಬೈಲ್ ಸಂಗ ಮಾತ್ರ ಬಿಡುವುದಿಲ್ಲವಲ್ಲಾ ಸಾರ್?*
ಕಾಲ್ ಮೂಲಕ ಕಾಲ ಬದಲಾದೀತೆಂಬ ಕನಸು!

ಮಲ್ಲಿಕಾರ್ಜುನ ಗಚ್ಚಿ, ಗೋಗಿ
*ಸಮಾಜಸೇವೆಯ ಸೋಗಿನಲ್ಲಡಗಿರುವ ಸ್ವಾರ್ಥಿ ರಾಜಕಾರಣಿಗಳಿಗೂ, ಧರ್ಮದ ಹೆಸರಿನಲ್ಲಿ ಕಾಡುವ ಉಗ್ರರಿಗೂ ವ್ಯತ್ಯಾಸವೇನು?*
ಇವರು binಗೆ ಸಮ, ಅವರು ಲ್ಯಾಡನ್‌ಗೆ ಸಮ!

ಎಸ್. ನರೇಂದ್ರನಾಯಕ್, ಗಂಗೊಳ್ಳಿ
*ಗಂಡ ಹೆಂಡತಿಗೆ ಕಿರುಕುಳ ಕೊಟ್ಟರೆ ಸುದ್ದಿಯಾಗುತ್ತದೆ; ಆದರೆ ಹೆಂಡತಿ ಕಿರುಕುಳ ಕೊಟ್ಟರೆ ಸುದ್ದಿಯಾಗದು, ಏಕೆ?*
ಗಂಡನ ಕಿರುಕುಳ ರೌಡಿಯ ಏಟಿನಂತೆ ಜಗಕ್ಕೇ ತಿಳಿಯುತ್ತದೆ; ಹೆಂಡತಿಯ ಕಿರುಕುಳ ಪೊಲೀಸರ ಪೆಟ್ಟಿನಂತೆ; ನೋವಿದ್ದರೂ ಹೊರಗೆ ಏನೇನೂ ಕಾಣದು!

ಶ್ರೀಮತಿ ಸುನಂದ, ಎಂ.ಟಿ.ಸಿ. ಕಾಲೋನಿ
*ಹೆಣ್ಣು ಮಕ್ಕಳಿಗೆ ಮದುವೆ ಕಡ್ಡಾಯವೇ?*
ಒಬ್ಬ ಫ್ರೀ ಸರ್ವೆಂಟ್ ಕಮ್ ಡ್ರೈವರ್ ಇರುವುದು ಒಳಿತು ಎಂಬುದು ಸಾಮಾನ್ಯ ಅಭಿಪ್ರಾಯ!

ಮಾಲತಿರಾಜು, ಬೆಂಗಳೂರು
*ಮದುವೆ ಎನ್ನುವುದು ಅಪಘಾತವೋ, ಆಘಾತವೋ?*
ಎರಡೂ ಅಲ್ಲ, ಬಂಧುಗಳೆಂಬ ಜಾಹೀರಾತುಗಳ ನಡುವೆ ಸಾಗುವ ಮೆಗಾ ಸೀರಿಯಲ್!

ರಮೇಶ್, ಬೆಂಗಳೂರು
*ಸರ್ಕಾರ ಉರುಳಿಸುವಲ್ಲಿ ವಿಫಲರಾದ ಗೌಡರು ಮೊಮ್ಮಗಳೊಡನೆ ಆಡುತ್ತಾ ಕಾಲ ಕಳೆಯುವುದು ಚಂದವಲ್ಲವೇ?*
ಪ್ಲೀಸ್, ಮೊಮ್ಮಕ್ಕಳಾದರೂ ಒಳ್ಳೇ ಬುದ್ಧಿ ಕಲಿಯಲಿ ಬಿಡಿ ಸಾರ್!

## ಬಹುಮಾನಿತ ಪ್ರಶ್ನೆ

ಹೆಚ್.ಆರ್. ಕಡಿವಾಲ, ಬಾದಾಮಿ
*ರೈತ ದೇಶದ ಬೆನ್ನೆಲುಬಾದರೂ ಆತನಿಗೆ ಸರಿಯಾದ ಸೌಲಭ್ಯ ಸಿಗುತ್ತಿಲ್ಲವೇಕೆ?*
ಬೆನ್ನೆಲುಬಾದುದರಿಂದಲೇ... ನಾವು ಬೆನ್ನೆಲುಬನ್ನು ಗಮನಿಸುವುದು ಸ್ಲಿಪ್ಡ್ ಡಿಸ್ಕ್ ಆದಾಗಲೇ!

ಜಾಕೋಬ್ ಡಿಸೋಜ, ಕುರುವಳ್ಳಿ
*ಕನ್ನಡಭಾಷೆ ಸಮೃದ್ಧಿಯಾಗಿ ಬೆಳೆಯುವುದು ಯಾವಾಗ?*
ನವೆಂಬರ್‌ನಲ್ಲಿ; ಆದರೆ ಡಿಸೆಂಬರ್‌ಗೇ ಅನ್ಯಭಾಷಾ ಸುನಾಮಿಯಿಂದ ಬೆಳೆ ಹಾಳು!

ಮಲ್ಲಿಕಾರ್ಜುನ ಆರ್. ಹುಲಗಬಾಳಿ, ಬನಹಟ್ಟಿ
*ನೀವು Ram, Rum?*
ಎರಡೂ ಅಲ್ಲ, ಡ್ರಮ್ಮು ಎಂದಳು ನನ್ನಾಕೆ!

ಆನಂದ್‌ಕುಮಾರ್, ಚಿತ್ರದುರ್ಗ
*ಉತ್ತರಗಳಲ್ಲಿ ಸಿಕ್ಸರ್ ಎತ್ತುವ ನೀವು ಐಪಿಎಲ್ ಕ್ರಿಕೆಟಿಗರಾಗಬೇಕಿತ್ತು...?*



ಚಿಯರ್ ಗರ್ಲ್ಸ್‌ಗೇ ಬೋಲ್ಡ್ ಆಗಿಬಿಡುತ್ತೇನೆಂದು ಯಾರೂ ಹರಾಜಿನಲ್ಲಿ ಕೊಳ್ಳಲು ಮುಂದೆ ಬರಲಿಲ್ಲ!

ಆರ್. ಶ್ರೀನಿಧಿ ಭಟ್, ಅನಂತಾಡಿ
*ಗುರು, ಮಳೆ ಬಂದಾಗ ಜೀರುಂಡೆ ಜೀಂ ಎನ್ನುತ್ತೆ, ಇದರ ಅರ್ಥ?*
ಚಳಿ ತಾಳಲಾಗದೆ ಜೀರಿಗೆ ಕಷಾಯಂ ಅನ್ನು ಷಾರ್ಟ್ ಆಗಿ ಜೀಂ ಎಂದು ಕೇಳುತ್ತದೆ!

ಆರ್. ಮಧುಸೂದನ್, ಹಾಸನ
*ಎರಡು ತಿಂಗಳಿಗೊಮ್ಮೆ ನನ್ನ ಮಾಸಭವಿಷ್ಯದಲ್ಲಿ ಚೆಲುವೆಯೊಬ್ಬಳ ಭೇಟಿ ಅಂತ ಇರುತ್ತಲ್ಲ?*
ತಿಳಿಯಿತು ಬಿಡಿ; ನಿಮ್ಮ ಡೆಂಟಿಸ್ಟ್ ಹೆಣ್ಣು!

ಜೆ.ಆರ್. ಆದಿನಾರಾಯಣಮುನಿ, ಬೆಂಗಳೂರು
*ಕರ್ಮಯೋಗಿ ಯಾರು?*
ಯೋಗಾಸನದಲ್ಲಿ ಕುಳಿತು ಕರ್ಮಗಳನ್ನು ಮಾಡಿಸುವವನು!

■ ರಾಮ್